



# ಮಹತ್ತರ ತಿರುವು

# ಮಹತ್ತರ ತಿರುವು

ನಮ್ಮ ಪ್ರತಿದಿನ ಪೇಪರ್ ಮತ್ತು ಟಿ.ವಿಯಲ್ಲಿ ಬರುವ ವಾರ್ತಾಸಂಚಿಕೆಗಳ ಮುಖ್ಯಾಂಶದಲ್ಲಿ, ಕೊಲೆಗಾರನು ಸಿಕ್ಕಿಬಿದ್ದನು, ಪ್ರಸಿದ್ಧ ರೌಡಿ ಸುಟ್ಟು ಕೊಲೆಮಾಡಲ್ಪಟ್ಟನು ಇಂತಹ ಸುದ್ದಿಗಳು ಇಂದಿಗೆ ಸಾಮಾನ್ಯವಾಗಿಬಿಟ್ಟಿದೆ. ದೇಶದಲ್ಲಿ ಎಲ್ಲೆಲ್ಲೂ ಕೊಲೆ, ಅಂಟು ರೋಗಗಳು, ಹಿಂದಿನ ಎಲ್ಲಾ ಕಾಲಕ್ಕಿಂತಲೂ ಈ ಕಾಲದಲ್ಲಿ ಬಹಳ ಹೆಚ್ಚಾಗಿರುವಂತದ್ದು ಕಂಡು ಬರುತ್ತಿದೆ. ಈ ಕೊಲೆ ಮಾಡುವಂತದ್ದನ್ನು ಒಂದು ಕಸುಬಾಗಿಯೆ ಮಾಡುತ್ತಿದ್ದ ಬೆಲ್ಜಿಯಂ ದೇಶದ ಹೆನ್ರಿಫ್ಲೆಮಿಂಗ್, ತನ್ನ ದುಷ್ಕೃತ್ಯವನ್ನು ಬಿಟ್ಟು ಒಂದು ಮನುಷ್ಯನಾಗಿ ಮಾರ್ಪಟ್ಟನು. ಏನು ನಿಜವಾಗಲುನಾ? ಇದು ಹೇಗೆ ಸಾಧ್ಯವೆಂದು ತಾನೆ ಯೋಚಿಸುತ್ತೀರಾ?

ಹೌದು! ಹೆನ್ರಿಫ್ಲೆಮಿಂಗಿನ ಹೊರ ತೋರಿಕೆಯನ್ನು ಕಂಡರೆ ಎಲ್ಲರಿಗೂ ಭಯಹಿಡಿಯುತ್ತಿತ್ತು. ಅವನು ಯಾರಿಗೂ ಭಯಪಡದವನು, ಯಾರನ್ನು ಕೊಲೆ ಮಾಡಲು ಕಳುಹಿಸಿದರು ಧೈರ್ಯವಾಗಿ ಕೊಲೆಮಾಡುವನು. ಈ ಕೆಲಸವನ್ನು ಮಾಡುವದರಿಂದ ತನಗೆ ಬೇಕಾದ ಅವಶ್ಯಕತೆಗಳನ್ನು ಸಂಧಿಸುತ್ತಿದ್ದನು. ಈ ಕೊಲೆಗಾರನು ಒಂದು ದಿನ ತನ್ನ ಹೆಂಡತಿ ಮಕ್ಕಳೊಂದಿಗೆ ಫ್ರಾನ್ಸ್ ದೇಶಕ್ಕೆ ಹೊರಟನು.

ಯಾತಕ್ಕಾಗಿ ಗೊತ್ತೆ? ಅಲ್ಲೂ ಇದೇ ಕೆಲಸವನ್ನು ಮಾಡುವದಕ್ಕಾಗಿಯೇ. ಯಥಾಪ್ರಕಾರ ಒಂದು ಕೊಲೆಯನ್ನು ಮಾಡುವ ಮುನ್ನ ನಾಲ್ಕು ಉದ್ದೇಶವನ್ನಿಟ್ಟುಕೊಂಡೆ ಕಾರ್ಯಮಾಡುವನು. ಅವನು ಒಂದು ಕೊಲೆಯನ್ನು ಮಾಡಲು ಉದ್ದೇಶಿಸುವ ಮುನ್ನ ಧಿಡೀರೆಂದು ವ್ಯಾಧಿ ಪೀಡಿತನಾದನು. ಬಹು ಶಕ್ತಿಶಾಲಿಯಾದ ಇವನು ತನ್ನ ಕಾಲುಗಳನ್ನು ಕೂಡ ಅಲ್ಲಾಡಿಸಲು ಆಗಲಿಲ್ಲ ಕಾಲುಗಳು ಬಾಗಿ ಹೋದವು. ಹಾಸಿಗೆಯಿಂದ ಎದ್ದು ನಡೆಯಲು ಕೂಡ ಸಾಧ್ಯವಾಗದೇ ಹೋಯಿತು.

ಹೆನ್ರಿಫ್ಲೆಮಿಂಗ್ ಅವನ ಹೆಂಡತಿ ಅವನನ್ನು ಪಕ್ಕದ ಆಸ್ಪತ್ರೆಗೆ ಸೇರಿಸಿದಳು. ಯಾವ ಒಂದು ಬದಲಾವಣೆಯು ಅವನ ದೇಹದಲ್ಲಿ ಕಾಣಲಿಲ್ಲ. ಇದರ ನಿಮಿತ ಅವನು ಬಹು ಕೋಪಗೊಂಡು ಕಿರುಚಾಡಿದನು. ನಂತರ ಆತನ ಹೆಂಡತಿ ಅವನನ್ನು ಮನೆಗೆ ಕರಕೊಂಡು ಬಂದು ಬಿಟ್ಟಳು.

ಹೆನ್ರಿಫ್ಲೆಮಿಂಗ್ ವ್ಯಾಧಿ ಪೀಡಿತನಾಗಿ **38**ವಾರಗಳು ಹಾದು ಹೋಯಿತು. ತನ್ನ ಹೆಂಡತಿಯು ಅವನು ಈ ಸ್ಥಿತಿಯಲ್ಲಿ ಕಷ್ಟಪಡುವದನ್ನು ಕಂಡು ಬೇರೊಂದು ಆಸ್ಪತ್ರೆಗೆ ಕರಕೊಂಡು ಹೋದಳು. ಅದು ಮಿಷನ್ ಆಸ್ಪತ್ರೆ, ಅಲ್ಲಿ ಅವನಿಗೆ ದೈವಪ್ರೀತಿಯಿಂದ, ಕರುಣೆಯಿಂದ ನೋಡಿಕೊಂಡರು. ಇದು ಅವನ ಹೆಂಡತಿಯ ಹೃದಯವನ್ನು ಮುಟ್ಟಿತು ಅದು ಒಂದು ಬದಲಾವಣೆಯನ್ನು ತಂದಿತು. ಚಿಕಿತ್ಸೆಯ ಮುಂಚೆ ಸತ್ಯವೇದವೆಂಬ ಪುಸ್ತಕದಿಂದ ಒಂದು ಚಿಕ್ಕ ಭಾಗವನ್ನು ಜೋರಾಗಿ ಎಲ್ಲರಿಗೂ ಕೇಳಿಸುವಂತೆ ಓದುವಂ ತದ್ದು ಅವರ ವಾಡಿಕೆ. ಒಂದು ದಿನ ಆ ವೈದ್ಯರ ಆಹ್ವಾನಕ್ಕಾಗಿ ಅಲ್ಲಿ ರೋಗಿಗಳು ಕಾದಿರುವ ಸಂಧರ್ಭದಲ್ಲಿ ವಾಕ್ಯವು ಓದಲ್ಪಟ್ಟಿತು. ಅಂದು ಸತ್ಯವೇದದಿಂದ **38**ವರ್ಷ ಪಾರ್ಶ್ವವಾಯು ರೋಗಿಯನ್ನು ಯೇಸು ಸ್ವಸ್ಥಮಾಡಿದನು ಎಂಬ ಸಂಭವವು ಓದಲ್ಪಟ್ಟಿತು.

ಹೆನ್ರಿಫ್ಲೆಮಿಂಗಿನ ಕಿವಿಗೂ ಈ ಮಾತು ಬಿತ್ತು, ಆ ಮಾತು ಅವನಿಗೆ ಬಹು ಆಶ್ಚರ್ಯಪಡಿಸಿತು. ಇದು ನನಗೆ ಸರಿಯಾದ ಮಾತು, ನಾನು ಆ ಮನುಷ್ಯನಂತೆ ಬಿದ್ದುಕೊಂಡಿದ್ದೇನೆ. ನಾನು **38**ವರ್ಷಗಳು ಅಲ್ಲ **38** ವಾರಗಳಿಂದ ಈ ರೋಗದಲ್ಲಿ ಬಿದ್ದುಕೊಂಡಿದ್ದೇನೆ ಎಂದು ಚಿಂತಿಸಿ ಅಳುತ್ತಿರುವ ಸಂಧರ್ಭದಲ್ಲಿ ಯಾರೋ ಅವನ ಹೃದಯದಲ್ಲಿ ಮಾತಾಡುವಂತೆ ಕೇಳಿಸಿತು. "ಯೇಸು  ನಿನ್ನನ್ನು ಪ್ರೀತಿಸುತ್ತಾನೆ. ಆತನನ್ನು ನಂಬು" ಎಂದೇ ಕೇಳಿಸಿತು. ಆದರೆ ಈ ಮಾತುಗಳು ಅವನ ಕೋಪವನ್ನು ಇನ್ನು ಹೆಚ್ಚು ಮಾಡಿತು.

ಆ ಒಂದು ಸಮಯದಲ್ಲಿ ವೈದ್ಯರು ಹೆನ್ರಿಫ್ಲೆಮಿಂಗನಿಗೆ ಚಿಕಿತ್ಸೆ ನೀಡಲು ಬಂದರು. ಅವನ ಹೆಂಡತಿಯ ಮೂಲಕ ಅವನ ಕ್ರೂರಸ್ವಭಾವವನ್ನು ತಿಳಿದುಕೊಂಡಿದ್ದ ವೈದ್ಯರು ಅವನ ಬಳಿ ಬಹು ತಾಳ್ಮೆಯಿಂದ ಮಾತನಾಡಿದರು. ನಾವು ಮಾಡು ಪ್ರಥಮಚಿಕಿತ್ಸೆಯನ್ನು ನಾವು ಮಾಡುವೆವು ಆದರೆ ಸಂಪೂರ್ಣವಾಗಿ ಗುಣಪಡಿಸುತ್ತೇವೆಂದು ಮಾತುಕೊಡಲು ಸಾಧ್ಯವಿಲ್ಲ. ನಿನ್ನ ದೇಹದಲ್ಲಿರುವ ರೋಗಕ್ಕಿಂತ ನಿನ್ನ ಹೃದಯದ ಪಾಪ ಬಹು ಕಠೋರವಾಗಿದೆ. ನಿನ್ನ ಘೋರ ಪಾಪವನ್ನು ಕ್ಷಮಿಸಲು ಯೇಸುವಿಗೆ ಮಾತ್ರ ಸಾಧ್ಯ. ಆತನ ಬಳಿ ಕ್ಷಮಾಪಣೆಯನ್ನು ಕೇಳು ಎಂದು ಹೇಳಿದರು. ತಕ್ಷಣ ಹೆನ್ರಿಫ್ಲೆಮಿಂಗ್ ಬಹು ಕೋಪದಿಂದ, ನನ್ನ ಕಾಲುಗಳು ಗುಣವಾಗಲು ಮಾತ್ರ ನಾನಿಲ್ಲಿ ಬಂದಿದ್ದೇನೆ. ಬೇರೆ ಯಾವುದಕ್ಕಾಗಿಯೂ ನಾನು ಇಲ್ಲಿಗೆ ಬಂಧ್ದಿಲ್ಲ ಅಂದನು. ಆ ಕ್ಷಣವೇ ಅವನು ಮೊದಲು ಕೇಳಿದ್ದ ಆ ಒಂದು ಸ್ವ ರ ಮತ್ತೆ ಅವನ ಹೃದಯದಲ್ಲಿ ಕೇಳಿಸಿತು.ಯೇಸು ನಿನ್ನನ್ನು ಪ್ರೀತಿಸುತ್ತಾನೆ. ಆತನನ್ನು ನಂಬು ತಕ್ಷಣ ಅವನ ಹೃದಯದಲ್ಲಿ ಒಂದು ಭಾರ ಉಂಟಾಯಿತು. ತಾನೊಬ್ಬ ಮಹಾ ಪಾಪಿ ಎಂದು ತಿಳಿದುಕೊಂಡು, ಕಿರುಚ್ಚುತ್ತಾ ದೇವರೆ ನಾನು ಪಾಪಿ, ನನ್ನ ಪಾಪಗಳನ್ನು ಕ್ಷಮಿಸು," ಎಂದು ಗೋಳಾಡಿದನು.

ಏನು ಆಶ್ಚರ್ಯ! ಕೆಲವೆ ದಿನಗಳೊಳಗೆ ಅವನ ಕಾಲುಗಳು ಸರಿಯಾಗಿಬಿಟ್ಟಿತು. ಎರಡು ಕಾಲುಗಳಲ್ಲಿ ಹೊಸ ಬಲ ಅಂದಿಗೆ ಅವನ ಕ್ರೂರವಾದ ಪಾಪ ಜೀವಿತಕ್ಕೆ ಮುದ್ರೆಹಾಕಿದನು.

ಪ್ರಿಯರೆ, ಹೆನ್ರಿಫ್ಲೆಮಿಂಗನು ದೇಹದ ಸ್ವಸ್ಥತೆಯನ್ನು ಮಾತ್ರವಲ್ಲ, ಹೃದಯದಲ್ಲಿ ತುಂಬಿರುವ ಪಾಪರೋಗದಿಂದಲೂ ಕೂಡ ಬಿಡುಗಡೆ ಹೊಂದಿದನು. ಹೌದು ಈ ಕ್ರೂರಪಾಪ, ಘೋರರೋಗವನ್ನು ಉಂಟುಮಾಡುತ್ತದೆ. ಒಬ್ಬ ಕೊಲೆಗಾರನು ಒಳ್ಳೆಯವನಾಗಿ ಮಾರ್ಪಟ್ಟನು, ನೀವೇಕೆ ಮಾರ್ಪಡಬಾರದು. ಇವನು ಎಂದಿಗೂ ಬದಲಾಗುವದೇ ಇಲ್ಲ.  ಅಬ್ಬಾ! ಈ ಪಾಪದಿಂದ ಮಾತ್ರ ನನ್ನಿಂದ ಹೊರಬರಲು ಸಾಧ್ಯವೇ ಇಲ್ಲ ಎಂದು ನೆನಸಿಕೊಂಡಿದ್ದೀರೇ? ಇಂದೇ ಯೇಸುವಿನ ಬಳಿ ಬನ್ನಿರಿ. ಯೇಸುವಿನಿಂದ ಬದಲಾಗಸದ ವ್ಯಕ್ತಿ ಲೋಕದಲ್ಲಿ ಒಬ್ಬನು ಇಲ್ಲ .

*ಯೇಸು ನಿನ್ನ ಅಪರಾಧಗಳನ್ನು ಕ್ಷಮಿಸುವನು ಸಮಸ್ತ ರೋಗಗಳನ್ನು ವಾಸಿಮಾಡುವನು* *(ಕೀರ್ತ 103:3)*

VOICE OF JESUS PUBLICATIONS
P.O.Box:6,Ramanathapuram.
623501. S.Inidia.
Phone: 98941 31211- 94423 22264
Email: vojpulication@gmail.com

VOICE OF JESUS MEDIA
P.O.Box:7206,Bangalore- 560 072.
Ph: 9731722977
Email: vojmedia@gmail.com

ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಬಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA